# ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ.820/2015

ಸಾಕ್ಷಿಗೆ ದಿನಾಂಕ 05-12-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 9 P.W.: 8

| | | |
|---|---|---|
| ಹೆಸರು | ಃ | ಎ ಶ್ರೀಶೈಲಪ್ಪ |
| ತಂದೆಯ ಹೆಸರು | ಃ | ವಿರಾಜಪ್ಪ |
| ವಯಸ್ಸು | ಃ | 69 ವರ್ಷ |
| ಉದ್ಯೋಗ | ಃ | ವಿಶ್ರಾಂತಿ ಜೀವನ |
| ವಾಸ ಸ್ಥಳ | ಃ | ಹಂಪಸಾಗರ ಗ್ರಾಮ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಚಾಸಾ-1 ನನ್ನ ಅಣ್ಣನ ಮಗಳು, ಚಾಸಾ-6 ನನ್ನ ಅತ್ತಿಗೆ, ಚಾಸಾ-7 ನನ್ನ ಅಣ್ಣ, ಚಾಸಾ-8 ನನ್ನ ಅಳಿಯ, ಚಾಸಾ-10 ನನ್ನ ಸ್ನೇಹಿತರು ಇರುತ್ತಾರೆ.

ದಿಃ13-12-2014 ರಂದು ಹಂಪಸಾಗರ ಗ್ರಾಮದಲ್ಲಿರುವ ನಮ್ಮ ಅಣ್ಣನ ಮಗಳ ಮನೆ ಕಳುವಾಗಿತ್ತು. ಕಳ್ಳರು ಆ ದಿನ ಮನೆಯ ಬಾಗಿಲ ಬೀಗವನ್ನು ಮುರಿದು ಒಳಗೆ ಹೋಗಿ ಗಾಡ್ರೆಜಿನ ಬೀರೋಗಳನ್ನು ಒಡೆದು ಬಂಗಾರದ ಸಾಮಾನುಗಳು ಮತ್ತು ಸೀರೆಗಳು ಮತ್ತು ದುಡ್ಡನ್ನು ಕಳವು ಮಾಡಿರುತ್ತಾರೆ. ಬಂಗಾರ ಸಾಮಾನುಗಳೆಂದರೆ 2 ಉಂಗುರ, ಒಂದು ಚೈನ್, ಬೆಂಡೋಲೆ, ಜುಮುಕಿ, ಬೋರ್ಮಾಳ ಸರ ಮತ್ತು ಒಂದು ತುಂಡು ಬಂಗಾರ ಆಗಿತ್ತು. ಅದರ ಒಟ್ಟು ತೂಕ 46 ಅಥವಾ 47 ಗ್ರಾಂ ಇರಬಹುದು ನಗದು ಹಣ ರೂ.5500/- ಇತ್ತು. ಸೀರೆಗಳು ಸುಮಾರು 30-40 ಇದ್ದವು. ಎಲ್ಲವೂ ಕಳುವಾಗಿರುತ್ತವೆ. ನಮ್ಮ ಅಣ್ಣ ಆ ದಿನ ನನಗೆ ಫೋನ್ ಮಾಡಿ ನನ್ನ ಮನೆಯ ಬಳಿ ಬಾ ಅಂತಾ ನನಗೆ ಹೇಳಿದನು. ಆಗ ನಾನು ನನ್ನ ಅಣ್ಣನ ಮನೆಯ ಬಳಿ ಹೋಗಿರುತ್ತೇನೆ. ಅಲ್ಲಿ ಹೋಗಿ ನೋಡಲಾಗಿ ಮನೆಯ ಬಾಗಿಲು ಮುರಿದಿದ್ದು ಇತ್ತು, ಕಪಾಟು ಮುರಿದಿದ್ದು ಇತ್ತು, ಸದರಿ ಕಪಾಟುಗಳನ್ನು ಕೆಡವಿದ್ದು ಸಹಾ ಇತ್ತು. ನಾವು ಘಟನೆಯ ಕುರಿತು ಮರುದಿನ ಪೋಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇವೆ. ಪೋಲೀಸರ ಮುಂದೆ ನಾನು ಹೇಳಿಕೆ ನೀಡಿದ್ದೇನೆ.

ನಾನು ಪುನಃ ಪೋಲೀಸ್ ಠಾಣೆಗೆ ಹೋಗಿರುತ್ತೇನೆ. ನಾನು ಯಾವುದೇ ಮರುಹೇಳಿಕೆಯನ್ನು ನೀಡಿರುವುದಿಲ್ಲ. ಕಳ್ಳರು ಯಾರು ಎನ್ನುವುದು ನನಗೆ ಗೊತ್ತಿಲ್ಲ ಅವರನ್ನು ನೋಡಿದರೆ ನನಗೆ ಗುರುತಿಸಲು ಸಾಧ್ಯವಿಲ್ಲ. ನ್ಯಾಯಾಲಯದ ಮುಂದಿರುವ 3 ನೇ ಆರೋಪಿ ನಮ್ಮ ಊರಿನವನು ಅವನ ಮೇಲೆ ಏನು ಪ್ರಕರಣ ಇದೆ ಯಾಕೆ ನ್ಯಾಯಾಲಯದಲ್ಲಿದ್ದಾನೆಂದು ನನಗೆ ಗೊತ್ತಿಲ್ಲ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-

ದಿಃ30-12-2014 ರಂದು ಪೋಲೀಸ್ರು ನನಗೆ, ಚಾಸಾ-1, 6, 7, 8 ಮತ್ತು 10 ರವರಿಗೆ ಠಾಣೆಗೆ ಕರೆಯಿಸಿ ಕಳುವಾದ ವಸ್ತುಗಳು ಮತ್ತು ಆರೋಪಿತರು ಸಿಕ್ಕಿರುತ್ತಾರಂತಾ ನಮಗೆ ತಿಳಿಸಿದರೆಂದರೆ ಸರಿ ಸಾಕ್ಷಿ ಮುಂದುವರೆದು ಆ ಬಗ್ಗೆ ನನಗೆ ನೆನಪಿಲ್ಲವೆನ್ನುತ್ತಾರೆ. ಆ ದಿನ ನಾನು ಠಾಣೆಗೆ ಹೋಗಿರುತ್ತೇನೆಂದರೆ ಸರಿ. ಆ ದಿನ ಪೋಲೀಸರು ಆರೋಪಿತರನ್ನು ನಮ್ಮ ಮುಂದೆ ಹಾಜರುಪಡಿಸಿ ಸದರಿ ಆರೋಪಿತರೇ ನಿಮ್ಮ ಮನೆ ಕಳುವು ಮಾಡಿದ್ದು ಅವರಿಂದ ಬಂಗಾರದ ಆಭರಣ ಮತ್ತು ಸೀರೆಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇವಂತಾ ನಮಗೆ ತಿಳಿಸಿದರು ಮತ್ತು ಆರೋಪಿತರು ಸಹಾ ನಮ್ಮ ಸಮಕ್ಷಮ ನಾವು ಮನೆ ಕಳುವು ಮಾಡಿರುತ್ತೇವಂತಾ ಒಪ್ಪಿಕೊಂಡಿರುತ್ತಾರೆಂದರೆ ಸರಿ. ಆರೋಪಿತರು ನಗದನ್ನು ನಾವು ಖರ್ಚು ಮಾಡಿಕೊಂಡಿರುತ್ತೇವೆ, ಬಂಗಾರದ ಆಭರಣಗಳನ್ನು ಮತ್ತು ಸೀರೆಗಳನ್ನು ಪೋಲೀಸರಿಗೆ ಕೊಟ್ಟಿರುತ್ತೇವಂತಾ ಪೋಲೀಸರಿಗೆ ತಿಳಿಸಿರುತ್ತಾರೆಂದರೆ ಸರಿ. ಆ ದಿನ ಪೋಲೀಸರು ಚಾಸಾ-11 ರವರ ಮೂಲಕ ಸದರಿ ಬಂಗಾರದ ಆಭರಣಗಳನ್ನು ಪರೀಕ್ಷಿಸಿದರು ಎಂದರೆ ಸರಿ. ಅದರ ತೂಕ ಮತ್ತು ಬೆಲೆಯನ್ನು ಸಹಾ ನಿಗಧಿ ಮಾಡಿದ್ದರೆಂದರೆ ಸರಿ. ಆ ದಿನ ಪೋಲೀಸರು 2 ನೇ ಆರೋಪಿ ಸಿಗಬೇಕು ಅವನಿಂದ 2 ಬಂಗಾರದ ಉಂಗುರ ಮತ್ತು ಗಟ್ಟಿಯನ್ನು ವಶಪಡಿಸಿಕೊಳ್ಳಬೇಕಾಗಿದೆ ಎಂದು ತಿಳಿಸಿದರೆಂದರೆ ನನಗೆ ನೆನಪಿಲ್ಲ. ನನಗೆ ಗೊತ್ತಿದ್ದರೂ ಗೊತ್ತಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-13 ಮತ್ತು 14 ರಲ್ಲಿ ಕಾಣುವ ಸೀರೆಗಳು ಮತ್ತು ಬಂಗಾರದ ಆಭರಣಗಳು ಆ ದಿನ ಕಳುವಾದ ವಸ್ತುಗಳಾಗಿರುತ್ತವೆಂದರೆ ಸರಿ. ದಿಃ30-12-2014 ರಂದು ನಾನು ಪೋಲೀಸರ ಮುಂದೆ ಮರುಹೇಳಿಕೆ ನೀಡಿದ್ದೇನೆಂದರೆ ನನಗೆ ನೆನಪಿಲ್ಲ, ಸದರಿ ಮರುಹೇಳಿಕೆಯನ್ನು ಸಾಕ್ಷಿಯು ಸ್ಪಷ್ಟವಾಗಿ ಒಪ್ಪಿಕೊಳ್ಳದೇ ಇರುವುದರಿಂದ ಅದನ್ನು ನಿಪಿ-20 ಎಂದು ಗುರುತಿಸಲಾಯಿತು.

ದಿಃ 07-07-2015 ರಂದು ಪೋಲೀಸರು ನನಗೆ ಪುನಃ ಠಾಣೆಗೆ ಕರೆಸಿದರೆಂದರೆ ನನಗೆ ನೆನಪಿಲ್ಲ. 2 ನೇ ಆರೋಪಿ ಸಿಕ್ಕಿದ್ದಾನೆ ಅವನಿಂದ 2 ಬಂಗಾರದ ಉಂಗುರ ಮತ್ತು ಗಟ್ಟಿಯನ್ನು ಅಮಾನತ್ತುಪಡಿಸಿಕೊಂಡಿರುತ್ತೇವಂತಾ ನಮಗೆ ಠಾಣೆಯಲ್ಲಿ ತಿಳಿಸಿದರೆಂದರೆ ನನಗೆ ನೆನಪಿಲ್ಲ. ಆ ದಿನ ಪೋಲೀಸರು 2 ನೇ ಆರೋಪಿಯನ್ನು ವಿಚಾರಿಸಲಾಗಿ ಮೇಲೆ ತಿಳಿಸಿದಂತೆ ಎಲ್ಲಾ ಆರೋಪಿತರು ಸೇರಿ ಮನೆಯ ಬೀಗ ಮುರಿದು ಕಳ್ಳತನ ಮಾಡಿರುತ್ತೇವೆ ಅದರಲ್ಲಿ ನಾನು 2 ಉಂಗುರ ಮತ್ತು ಒಂದು ಬಂಗಾರದ ಗಟ್ಟಿ ಮತ್ತು ನಗದು ಹಣ ರೂ.1400/- ಗಳನ್ನು

ತೆಗೆದುಕೊಂಡಿರುತ್ತೇನಂತಾ ನನಗೆ ತಿಳಿಸಿದನೆಂದರೆ ಸರಿ. 2 ನೇ ಆರೋಪಿತನು ನಗದನ್ನು ನಾನು ಬಳಸಿಕೊಂಡಿದ್ದೇನೆ ಬಂಗಾರದ ಉಂಗುರಗಳನ್ನು ಸಂತೆಯಲ್ಲಿ ಯಾರಿಗೋ ಮಾರಾಟ ಮಾಡಿದ್ದೇನಂತಾ ತಿಳಿಸಿದನು ಎಂದರೆ ಸರಿ. ಬಂಗಾರದ ಗಟ್ಟಿಯನ್ನು ನಾನು ಮನೆಯಲ್ಲಿ ಟ್ರಂಕಿನಲ್ಲಿಟ್ಟಿದ್ದೇನೆ ಅಂತಾ ಹೇಳಿ ಅದನ್ನು ತಂದು ಪೋಲೀಸರ ಮುಂದೆ ಹಾಜರುಪಡಿಸಿದನೆಂದರೆ ಸರಿ. ಆ ಸಮಯದಲ್ಲೂ ಸಹಾ ಚಾಸಾ-11 ರವರ ಮೂಲಕ ಸದರಿ ಬಂಗಾರದ ಗಟ್ಟಿಯನ್ನು ಪರೀಕ್ಷಿಸಲಾಯಿತು ಎಂದರೆ ಸರಿ. ದಿಃ 07-07-2015 ರಂದು ನಾನು ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆಂದರೆ ಸರಿ. 2 ನೇ ಆರೋಪಿಯನ್ನು ನಾನು ನೋಡಿದರೆ ಗುರುತಿಸುತ್ತೇನೆಂದರೆ ಸರಿಯಲ್ಲ ಸಾಕ್ಷಿಯು ನನಗೆ ಗುರುತಿಸಲು ಸಾಧ್ಯವಿಲ್ಲವೆನ್ನುತ್ತಾರೆ. ಎಲ್ಲಾ ವಿಚಾರ ಗೊತ್ತಿದ್ದರೂ ಸಹಾ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲು. 1 ನೇ ಆರೋಪಿ ಪರ ಶ್ರೀ ಪಿ ಆರ್ ವಕೀಲರಿಂದಃ-</u>

ಚಾಸಾ-1 ನನ್ನ ಅಣ್ಣನ ಮಗಳು, ಚಾಸಾ-8 ನನ್ನ ಅಳಿಯ ಎಂದರೆ ಸರಿ. ಅದೇ ರೀತಿ ಚಾಸಾ-6, 7, 10 ರವರು ನನ್ನ ಸಂಬಂಧಿಕರು ಎಂದರೆ ಸರಿ. ದಿಃ13-12-2014 ರಂದು ನಾನು ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ. ನಾನು ಒಂದು ಸಾರಿ ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ನಾನು ಹಂಪಸಾಗರ ಗ್ರಾಮದಲ್ಲಿ ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ. ನನ್ನ ಹೇಳಿಕೆ ಪಡೆದ ಅಧಿಕಾರಿಯ ಹೆಸರು ಮತ್ತು ಪದನಾಮ ನನಗೆ ನೆನಪಿಲ್ಲ. ಆ ದಿನ ಚಾಸಾ-11 ರವರನ್ನು ಯಾರು ಕರೆತಂದರೆಂದು ನನಗೆ ಗೊತ್ತಿಲ್ಲ. ಸದರಿ ಬಂಗಾರದ ವಸ್ತುಗಳನ್ನು ಚಾಸಾ-11 ರವರು ತೂಕದ ಯಂತ್ರದಿಂದ ತೂಕ ಮಾಡಿರುತ್ತಾರೆ. ಯಾವ್ಯಾವ ಬಂಗಾರದ ಆಭರಣದ ತೂಕ ಎಷ್ಟು ಎಷ್ಟು ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಬಂಗಾರದ ಯಾವ್ಯಾವ ಆಭರಣ ಎಷ್ಟು ಎಷ್ಟು ರೂಪಾಯಿ ಬೆಲೆ ಬಾಳುತ್ತದೆನ್ನುವುದು ನನಗೆ ಹೇಳಲು ಬರುವುದಿಲ್ಲ. ಆ ದಿನ ಠಾಣೆಗೆ ನನ್ನ ಅಣ್ಣ ಚಾಸಾ-7 ರವರು ಕರೆದುಕೊಂಡು ಹೋಗಿರುತ್ತಾರೆ. ನಿಪಿ-13 ಮತ್ತು 14 ರ ಪೋಟೋದಲ್ಲಿ ನಾನು ಇರುವುದಿಲ್ಲ. ಅದರಲ್ಲಿ ನಮ್ಮ ಅಣ್ಣ ಇರುವುದರಿಂದ ಆ ಪೋಟೋಗಳನ್ನು ನಾನು ಗುರುತಿಸಿದ್ದೇನೆಂದರೆ ಸರಿ. ಆ ದಿನ ನಾನು ಠಾಣೆಗೆ ಹೋಗಿದ್ದೆ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ದಿನ ಆರೋಪಿತರನ್ನು ಪೋಲೀಸರು ನಮ್ಮ ಮುಂದೆ ಹಾಜರುಪಡಿಸಿ ಅವರನ್ನು ನಮಗೆ ತೋರಿಸಿ ಇವರೇ ಕಳುವು ಮಾಡಿರುತ್ತಾರಂತಾ ಹೇಳಿದರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ಆ ದಿನ ನಮ್ಮ ಸಮಕ್ಷಮ ತಾವು ಕಳುವು ಮಾಡಿರುತ್ತೇವಂತಾ ಒಪ್ಪಿಕೊಂಡಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ಮತ್ತು ಮರುಹೇಳಿಕೆಗಳನ್ನು ನೀಡಿಲ್ಲವೆಂದರೆ ಸರಿಯಲ್ಲ.

ಈ ಘಟನೆಗೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲವೆಂದರೆ ಸರಿಯಲ್ಲ. ನನ್ನ ಸಮಕ್ಷಮ 2 ನೇ ಆರೋಪಿಯನ್ನು ಪೋಲೀಸರು ವಿಚಾರಿಸಿಲ್ಲ, ಅವನಿಂದ ಯಾವುದೇ ಬಂಗಾರದ ಆಭರಣಗಳನ್ನು ವಶಪಡಿಸಿಕೊಂಡಿಲ್ಲ, 2 ನೇ ಆರೋಪಿತನು ನನ್ನ ಸಮ್ಮುಖದಲ್ಲಿ ಯಾವುದೇ ತಪ್ಪು ಒಪ್ಪಿಗೆ ಮಾಡಿಕೊಂಡಿಲ್ಲ ಮತ್ತು ಯಾವುದೇ ಹಣವನ್ನು ಖರ್ಚು ಮಾಡಿರುತ್ತೇನಂತಾ ಮತ್ತು ಬಂಗಾರದ ಉಂಗುರಗಳನ್ನು ಮಾರಾಟ ಮಾಡಿರುತ್ತೇನಂತಾ ಹಾಗೂ ಗಟ್ಟಿ ಬಂಗಾರವನ್ನು ಮನೆಯಲ್ಲಿಟ್ಟಿರುತ್ತೇನಂತಾ ಹೇಳಿರುವುದಿಲ್ಲವೆಂದರೆ ಸರಿಯಲ್ಲ. ಯಾವುದೇ ಆರೋಪಿತರು ಹಣವನ್ನು ಖರ್ಚು ಮಾಡಿರುತ್ತೇವಂತಾ ಹೇಳಿರುವುದಿಲ್ಲವೆಂದರೆ ಸರಿಯಲ್ಲ. ಚಾಸಾ-1 ರವರು ನನ್ನ ಅಣ್ಣನ ಮಗಳಾಗಿರುವುದರಿಂದ ಅವಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀಸವಾಲನ್ನು 2 ಮತ್ತು 3 ನೇ ಆರೋಪಿತರ ಪರ ವಕೀಲರು ಅಳವಡಿಸಿಕೊಂಡಿರುತ್ತಾರೆ.)

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ